# ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ 11(1) ರ ಮೇರೆಗೆ**

**ಪ್ರಾಥಮಿಕ ಅಧಿಸೂಚನೆ ಕ್ರಮಾಂಕ: ಎಲ್.ಎ.ಕ್ಯೂ/ಸಿಆರ್/15/2015-16 ದಿ:08-02-2021.**

ಈ ಕೆಳಗಿನ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಹುಬ್ಬಳ್ಳಿ-ಚಿಕ್ಕಜಾಜೂರು ರೈಲ್ವೆ ಡಬ್ಲಿಂಗ್ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆಯ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆರವರಿಗೆ ಕಂಡು ಬಂದಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013ರ ಕಲಂ 3(ಜಿ) ಮತ್ತು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ) ನಿಯಮಾವಳಿಗಳು 2015ರ ನಿಯಮ 2(ಸಿ)ರ ಮೂಲಕ ಪ್ರದತ್ತ ಅಧಿಕಾರವನ್ನು ಚಲಾಯಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ ದಾವಣಗೆರೆ ಇವರನ್ನು ಈ ಮೂಲಕ ಅಧಿಕೃತಗೊಳಿಸಲಾಗಿದೆ ಹಾಗೂ ಕಲಂ 43ರ ಮೇರೆಗೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಕಂಇ 56 ಭೂಸ್ವಾಬೆ.2014 ದಿನಾಂಕ: 17.07.2014 ರಲ್ಲಿ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಅಧಿಕೃತ ಪ್ರಾಧಿಕಾರದ ಆಡಳಿತಾಧಿಕಾರಿಗಳಾಗಿ ಅಧಿಕಾರ ಚಲಾಯಿಸಲು ಅಪರ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರಿಗೆ ನೀಡಲಾಗಿದೆ.

ಈ ಪ್ರಕಟಣೆಯು ಕೇಂದ್ರ ಅಧಿನಿಯಮ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ ಕಲಂ 11(1) ರಂತೆ ಹೊರಡಿಸಲಾಗಿದೆ. ಭೂಸ್ವಾಧೀನಕ್ಕೆ ಒಳಪಡುವ ಈ ಕೆಳಕಂಡ ಅನುಸೂಚಿಯಲ್ಲಿ ಕಾಣಿಸಿರುವ ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ವ್ಯಾಪ್ತಿಗೆ ಈ ಕೆಳಕಂಡ ಒಟ್ಟು 02 ಗ್ರಾಮಗಳಿಂದ **13156 ಚ.ಅ ಮತ್ತು 0-02 ಎ.ಗುಂ** ಹಾಗೂ ದಾವಣಗೆರೆ ತಾಲ್ಲೂಕಿನ ಒಂದು ಗ್ರಾಮದಿಂದ **00-11** ಎ.ಗುಂ ಜಮೀನುಗಳ ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ, ದಾವಣಗೆರೆ ಇವರ ಕಛೇರಿಯಲ್ಲಿ ಪರಿಶೀಲನೆಗೆ ಇಡಲಾಗಿದೆ.

ಸರ್ಕಾರವು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ, ದಾವಣಗೆರೆ ಇವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಕಲಂ 12ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ನೀಡಿರುತ್ತದೆ.

ಕಲಂ 11(4)ರಲ್ಲಿ ತಿಳಿಸಿರುವಂತೆ ಮೇಲ್ಕಂಡ ಜಮೀನುಗಳಲ್ಲಿ ಆಸಕ್ತಿಯುಳ್ಳ ವ್ಯಕ್ತಿಗಳು ಜಮೀನಿನ ವಿಲೇವಾರಿಗಾಗಿ ಮಾರಾಟ, ಗುತ್ತಿಗೆ, ಅಡಮಾನ, ಹಸ್ತಾಂತರ ವಿನಿಮಯ ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವುದೇ ಅಭಿವೃದ್ಧಿ ವೆಚ್ಚಗಳನ್ನು ಈ ಅಧಿಸೂಚನೆ ಪ್ರಕಟವಾದ ನಂತರ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರ ಮಂಜೂರಾತಿಯನ್ನು ಪಡೆಯದೆ ಮಾಡಿದ ಪಕ್ಷದಲ್ಲಿ ಅಂತಿಮವಾಗಿ ಭೂಸ್ವಾಧೀನಗೊಳಿಸಲಾದ ಜಮೀನುಗಳಿಗೆ ಪರಿಹಾರ ಧನವನ್ನು ನಿರ್ಧರಿಸುವಾಗ ಉಪೇಕ್ಷಿಸಲಾಗುವುದು.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013ರ ಕಲಂ 4 ರಂತೆ ಸಾಮಾಜಿಕ ಪರಿಣಾಮ ನಿರ್ಧರಣೆಯ ಅಧ್ಯಯನಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ:02 ಎಕ್ಯೂಸಿ 2020(ಇ) ಬೆಂಗಳೂರು ದಿನಾಂಕ: 11.02.2020 ರ ಆದೇಶದಂತೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು 2013 ರ ಮೂಲ ಭೂಸ್ವಾಧೀನ ಕಾಯ್ದೆಯ ಅಧ್ಯಾಯ-|| ರಡಿ ಸಾಮಾಜಿಕ ಪರಿಣಾಮ ನಿರ್ಧರಣೆ (SIA) ಅಧ್ಯಯನ ಮಾಡುವುದರಿಂದ ಹಾಗೂ ಅಧ್ಯಾಯ-||| ರ ಕಲಂ (10) ಅನ್ವಯಿಸುವುದರಿಂದ ವಿನಾಯಿತಿ ನೀಡಿ ಆದೇಶಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013ರ ಅಧ್ಯಾಯ 3ರ 10(4)ರಂತೆ ಲೀನಿಯರ್ ಯೋಜನೆಗಳಾದ ರೈಲು, ರಸ್ತೆ ಸಾರಿಗೆ ಅಂತಹವುಗಳು ಆಹಾರ ಭದ್ರತೆಯಿಂದ ವಿನಾಯಿತಿ ಹೊಂದಿವೆ.

ಈ ಪ್ರಕಟಣೆಯಲ್ಲಿ ಪ್ರಕಟಿಸಲಾದ ಜಮಿನುಗಳಲ್ಲಿ ಆಸಕ್ತಿಯುಳ್ಳವರು ಅಧಿಸೂಚನೆ ಪ್ರಕಟವಾದ **60** ದಿನಗಳೊಳಗಾಗಿ ಕಲಂ **15**ರಂತೆ ಆಕ್ಷೇಪಣೆಗಳನ್ನು ಮಾಡುವುದಿದ್ದರೆ ಅಂತಹ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ, ಕುರುಬರ ಹಾಸ್ಟೆಲ್ ಕಟ್ಟಡ ಜಯದೇವ ಸರ್ಕಲ್ ಹತ್ತಿರ ದಾವಣಗೆರೆರವರಿಗೆ ನೀಡತಕ್ಕದ್ದು.

<u>ಅನುಸೂಚಿ</u>

ಜಿಲ್ಲೆ: ದಾವಣಗೆರೆ ತಾಲ್ಲೂಕು : ಹರಿಹರ ಹೋಬಳಿ: ಕಸಬಾ ಗ್ರಾಮ: ಮಹಜೇನಹಳ್ಳಿ

| ಕ್ರ ಸಂ | ಖಾತೆದಾರರ ಹೆಸರು ಪಹಣಿಯಂತೆ | ಪಹಣಿಯಂತೆ ಸ. ನಂ | ಪಹಣಿಯಂತೆ ಹಿ. ನಂ | ತರಹೆ | ಭೂಸ್ವಾಧೀನದ ವಿಸ್ತೀರ್ಣ ಐನು | ಖರಾಬು ಎ | ಖರಾಬು ಬಿ | ಬಾಕಿ | ಚಕ್ಕುಬಂದಿ ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | ಭೂಸ್ವಾಧೀನವಾಗಿರುವ ಪ್ರದೇಶದಲ್ಲಿರುವ ಮರ/ಬಾವಿ/ ಕೊಳವೆ/ ಕಟ್ಟಡ/ವಗೈರೆ ವಿವರ | ಆಕಾರ | ಷರಾ |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | ಪಿ.ವಿ. ಚಂದ್ರನ್ ಬಿನ್ ಪಿ.ವಿ ಸ್ವಾಮಿ (ಕೇರಳ ಟ್ರಾನ್ಸ್‌ಪೋರ್ಟ್) | 11 | 4ಬಿ | NA | 1559 ಚ.ಅ | – | – | 1559 ಚ.ಅ | ಸ.ನಂ 11/5ಬಿ | ರೈಲ್ವೆ ಸ್ಟೇಷನ್ ಸ.ನಂ 11/3 | ರೈಲ್ವೆ ಹಳಿ | ಉಳಿದ ಜಮೀನು | – | – | – |
| 2 | ಹೆಚ್.ಜಿ ಮೊಹಮ್ಮದ್ ಉಮರ್ ಬಿನ್ ಅಬ್ದುಲ್ ಜಬ್ಬಾರ್ ಸಾಬ್ ಸೈಯದ್ ಫೈಜುಲ್ಲಾ ಬಿನ್ ಸೈಯದ್ ಇಬ್ರಾಹಿಂ ಸಾಬ್ | | | | 830 ಚ.ಅ | – | – | 830 ಚ.ಅ | | | | | | | |
| 3 | ಭಾಗ್ಯಲಕ್ಷ್ಮಮ್ಮ ಕೋಂ ಬಿ.ಜಿ ಮಲ್ಲಿಕಾರ್ಜುನ | 11 | 5ಬಿ | NA | 984 ಚ.ಅ | – | – | 984 ಚ.ಅ | ರಿ.ಸ.ನಂ 11/5ಎ | ರಿ.ಸ.ನಂ 11/4ಬಿ | ರೈಲ್ವೆ ಹಳಿ | ಉಳಿದ ಜಮೀನು | – | – | – |
| 4 | ಕರಿಬಸಮ್ಮ ಕೋಂ ಚನ್ನಬಸಪ್ಪ | | | | 1162 ಚ.ಅ | – | – | 1162 ಚ.ಅ | | | | | | | |
| 5 | ಬಿ.ಬಸವರಾಜಪ್ಪ ಬಿನ್ ಚನ್ನಬಸಪ್ಪ ರೇಣುಕಮ್ಮ ಕೋಂ ನಾಗರಾಜ (ಜಂಟಿ) | 11 | 5ಎ | NA | 2302 ಚ.ಅ | – | – | 2302 ಚ.ಅ | ರಿ.ಸ.ನಂ 11/6ಬಿ | ರಿ.ಸ.ನಂ 11/5ಬಿ | ರೈಲ್ವೆ ಹಳಿ | ಉಳಿದ ಜಮೀನು | – | – | – |
| 6 | ಡಾ॥ ಗುಲಾಂ ನಬಿ ಬಿನ್ ಹಬೀಬುಲ್ಲಾಖಾನ್ | 11 | 6ಬಿ | NA | 838 ಚ.ಅ | – | – | 838 ಚ.ಅ | ರಿ.ಸ.ನಂ 11/6ಎ | ರಿ.ಸ.ನಂ 11/5ಎ | ರೈಲ್ವೆ ಹಳಿ | ಉಳಿದ ಜಮೀನು | – | – | – |
| 7 | ಡಾ॥ ನಜೀಬುಲ್ಲಾಖಾನ್ ಬಿನ್ ಡಾ॥ ಗುಲಾಂ ನಬಿ | | | | 1640 ಚ.ಅ | – | – | 1640 ಚ.ಅ | | | | | – | – | – |
| 8 | ಮನ್ಸೂರ್ ಬಿನ್ ಮಹಬೂಬ್ ಸಾಬ್ | 11 | 6ಎ | NA | 958.5 ಚ.ಅ | – | – | 958.5 ಚ.ಅ | ರಿ.ಸ.ನಂ 11/7 | ರಿ.ಸ.ನಂ 11/6ಬಿ | ರೈಲ್ವೆ ಹಳಿ | ಉಳಿದ ಜಮೀನು | – | – | – |
| | **ಒಟ್ಟು** | | | | **10273.5 (ಚ.ಅ)** | – | – | **10273.5 (ಚ.ಅ)** | | | | | | | |

ಜಿಲ್ಲೆ: ದಾವಣಗೆರೆ ತಾಲ್ಲೂಕು : ಹರಿಹರ ಹೋಬಳಿ: ಕಸಬಾ ಗ್ರಾಮ: ಅಮರಾವತಿ

| ಕ್ರ ಸಂ | ಖಾತೆದಾರರ ಹೆಸರು ಪಹಣಿಯಂತೆ | ಪಹಣಿಯಂತೆ | | ತರಹೆ | ಭೂಸ್ವಾಧೀನದ ವಿಸ್ತೀರ್ಣ (ಎ.ಗುಂ) | | | | ಚಕ್ಕುಬಂದಿ | | | | ಭೂಸ್ವಾಧೀನವಾಗಿರುವ ಪ್ರದೇಶದಲ್ಲಿರುವ ಮರ/ಬಾವಿ/ ಕೊಳವೆ/ ಕಟ್ಟಡ/ವಗೈರೆ ವಿವರ | ಆಕಾರ | ಷರಾ |
|---|---|---|---|---|---|---|---|---|---|---|---|---|---|---|---|
| | | ಸ.ನಂ | ಹಿ.ನಂ | | ಐನು | ಖರಾಬು ಎ | ಖರಾಬು ಬಿ | ಬಾಕಿ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | ಅನಿತಾ.ಎಸ್.ಸಿ ಕೋಂ ವಿಜಯ ಕುಮಾರ್ | 64 | 2 | - | 0–02 (ಎ.ಗುಂ) | – | – | 0–02 (ಎ.ಗುಂ) | ರಿ.ಸ.ನಂ 64/1 | ರಿ.ಸ.ನಂ 67 | ಪಿ.ಬಿ ರಸ್ತೆ | ರೈಲ್ವೆ ಹಳಿ | – | – | – |
| 2 | ಜಿ.ಕೆ ವಿರೂಪಾಕ್ಷಪ್ಪ ಬಿನ್ ಜಿ.ಕೆ ಮಲ್ಲೇಶಪ್ಪ | | | | 660 ಚ.ಅ | – | – | 660 ಚ.ಅ | ರಸ್ತೆ | ರಸ್ತೆ | ಪಿ.ಬಿ ರಸ್ತೆ ಸೈಟ್ ನಂ 06 | ರೈಲ್ವೆ ಹಳಿ | – | – | – |
| 3 | ಗಂಗಮ್ಮ ಕೋಂ ಮಲ್ಲಿಕಾರ್ಜುನ | 83 | 1ಎ | NA | 650 ಚ.ಅ | – | – | 650 ಚ.ಅ | ರಸ್ತೆ | ರಸ್ತೆ | ಸೈಟ್ ನಂ 10 | ರೈಲ್ವೆ ಹಳಿ | – | – | – |
| 4 | ಕಮಲಮ್ಮ ಕೋಂ ಕರಿಬಸಪ್ಪ ಎಂ.ಇ | | | | 875 ಚ.ಅ | – | – | 875 ಚ.ಅ | ರಸ್ತೆ | ರಸ್ತೆ | ಸೈಟ್ ನಂ 15 | ರೈಲ್ವೆ ಹಳಿ | – | – | – |
| 5 | ಶಂಕರ್ ಸಾ ಲದ್ವ ಬಿನ್ ನಾಗೋಸಾ ಲದ್ವ ನಾಗರಾಜ ಬಿನ್ ಐರಣಿ ಭೈರಪ್ಪ | 83 | 1ಎ | NA | 697.5 ಚ.ಅ | – | – | 697.5 ಚ.ಅ | ರಸ್ತೆ | ರಸ್ತೆ | ಸೈಟ್ ನಂ 21 | ರೈಲ್ವೆ ಹಳಿ | – | – | – |
| | **ಒಟ್ಟು** | | | | **0-02 ಎ.ಗುಂ 2,882.5 (ಚ.ಅ)** | – | – | **0-02 ಎ.ಗುಂ 2,882.5 (ಚ.ಅ)** | | | | | | | |

ಜಿಲ್ಲೆ: ದಾವಣಗೆರೆ ತಾಲ್ಲೂಕು : ದಾವಣಗೆರೆ ಹೋಬಳಿ: ಮಾಯಕೊಂಡ ಗ್ರಾಮ: ದಿಂಡದಹಳ್ಳಿ

| ಕ್ರ ಸಂ | ಖಾತೆದಾರರ ಹೆಸರು ಪಹಣಿಯಂತೆ | ಪಹಣಿಯಂತೆ | | ತರಹೆ | ಭೂಸ್ವಾಧೀನದ ವಿಸ್ತೀರ್ಣ (ಎ.ಗುಂ) | | | | ಚಕ್ಕುಬಂದಿ | | | | ಭೂಸ್ವಾಧೀನವಾಗಿರುವ ಪ್ರದೇಶದಲ್ಲಿರುವ ಮರ/ಬಾವಿ/ ಕೊಳವೆ/ ಕಟ್ಟಡ/ವಗೈರೆ ವಿವರ | ಆಕಾರ | ಷರಾ |
|---|---|---|---|---|---|---|---|---|---|---|---|---|---|---|---|
| | | ಸ.ನಂ | ಹಿ. ನಂ | | ಐನು | ಖರಾಬು | | ಬಾಕಿ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | | | |
| | | | | | | ಎ | ಬಿ | | | | | | | | |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** | **16** |
| 1 | ನಾಗೇಂದ್ರಪ್ಪ ಬಿನ್ ಸಣ್ಣಕ್ಯಾತಪ್ಪ | 38 | 1ಎ | ತರಿ | 00–11 ಎ.ಗುಂ | – | 00–06 ಎ.ಗುಂ | 00–05 ಎ.ಗುಂ | ಉಳಿದ ಜಮೀನು | ರೈಲ್ವೆ ಹಳಿ | ರಿ.ಸ. ನಂ 37 | ಚಿಕ್ಕಮಾಗಡಿ ಗಡಿ | – | 0.08 | – |
| | ಒಟ್ಟು | | | | **00–11** | **–** | **00–06** | **00–05** | | | | | | | |

## <u>ಘೋಷ್ವಾರೆ</u>

| ತಾಲ್ಲೂಕು: ಹರಿಹರ | | | | | | | | |
|---|---|---|---|---|---|---|---|---|
| ಕ್ರ. ಸಂ | ಗ್ರಾಮ | ಖುಷ್ಕಿ | ತರಿ | ಭಾಗಾಯ್ತು | ಭೂ.ಪ | ಖರಾಬು | | (ಖ) ಜಾ.ತಾ (ಒಟ್ಟು) |
| | | | | | | (ಅ) | (ಬ) | |
| 1 | ಮಹಜೇನಹಳ್ಳಿ | 10273.5 ಚ.ಅ | – | – | – | – | – | 10273.5 ಚ.ಅ |
| 2 | ಅಮರಾವತಿ | 0-02 ಎ.ಗುಂ 2882.5 ಚ.ಅ | – | – | – | – | – | 0-02 ಎ.ಗುಂ 2882.5 ಚ.ಅ |
| ತಾಲ್ಲೂಕು: ದಾವಣಗೆರೆ | | | | | | | | |
| 1 | ದಿಂಡದಹಳ್ಳಿ | 0–11 ಎ.ಗುಂ | – | – | – | – | 0–06 ಎ.ಗುಂ | 0–05 ಎ.ಗುಂ |

ಸಹಿ/-
ವಿಶೇಷ ಭೂಸ್ವಾಧೀನಾಧಿಕಾರಿ
ಕೊಟ್ಟೂರು-ಹರಿಹರ ರೈಲ್ವೆ ಬ್ರಾಡ್ ಗೇಜ್ ಲೈನ್,
ನಿರ್ಮಾಣ ಯೋಜನೆ,ದಾವಣಗೆರೆ.

ಸಹಿ/-
ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ,
ದಾವಣಗೆರೆ